ಊ) ವಿಭಾಗೀಯ ಹಾಗೂ ಉಪ ವಿಭಾಗದ ಮಟ್ಟದಲ್ಲಿ ಕ್ರಿಮಿನಲ್ ಇಂಟಲಿಜೆನ್ಸ್ ಸ್ಕ್ವಾಡ್ ಎಂಬ ಪ್ರತ್ಯೇಕ ತಂಡಗಳನ್ನು ರಚಿಸಲಾಗಿದ್ದು. ಅವುಗಳು ಈಗಾಗಲೇ ಕಾರ್ಯ ನಿರ್ವಹಿಸುತ್ತಿದ್ದು ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ಅಪರಾಧಗಳನ್ನು ತಡೆಗಟ್ಟಲಾಗುತ್ತಿದೆ.

ಊ) ಇಲಾಖೆಯ ಕಟ್ಟನಿಟ್ಟಿನ ಕ್ರಮಗಳು ಈ ಕೆಳಗಿನಂತಿವೆ.

1. ಹಗಲು ರಾತ್ರಿ ಗಸ್ತು ವ್ಯವಸ್ಥೆಯನ್ನು ಠಾಣಾ ವ್ಯಾಪ್ತಿಗಳಲ್ಲಿ ಬಿಗಿಗೊಳಿಸಲಾಗಿದೆ

2. ಚೀತಾ ಮತ್ತು ವಾಹನಗಳ ಗಸ್ತು ವ್ಯವಸ್ಥೆ ಹಗಲು ಮತ್ತು ರಾತ್ರಿ ಮಾಡಲಾಗುತ್ತಿದೆ.

3. ಅಪರಾಧಗಳನ್ನು ಎಸಗುವ ಎಂ.ಓ ಕ್ರಿಮಿನಲ್ಸ್ ಪತ್ತೆ ಹಚ್ಚಿ ಪ್ರಶ್ನಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

4. ನಾಕಾಬಂಧಿ ಕಾರ್ಯಕ್ರಮ ನಡೆಸುತ್ತಿದ್ದು, ಅಪರಾಧಿಗಳನ್ನು ಪತ್ತೆ ಹಚ್ಚಲಾಗುತ್ತಿದೆ.

5. ರೌಡಿ ಚಟುವಟಿಕೆಗಳ ಮೇಲೆ ನಿಗಾವಹಿಸಲಾಗಿರುತ್ತದೆ.

6. ಪೊಲೀಸ್ ಇನ್ಸ್‌ಪೆಕ್ಟರ್, ಎ.ಸಿ.ಪಿ ಹಾಗೂ ಡಿ.ಸಿ.ಪಿ ರವರುಗಳಿಗೆ ಪ್ರತಿ ರಾತ್ರಿ ಸರದಿ ಮೇರೆಗೆ ರಾತ್ರಿ ಗಸ್ತು ನಡೆಯುತ್ತಿದೆ.

7. ವಿಭಾಗೀಯ ಮಟ್ಟದಲ್ಲಿ ವಿಶೇಷ ತಂಡಗಳನ್ನು ರಚಿಸಲಾಗಿದ್ದು ಸದರಿ ತಂಡಗಳು ಸಂಬಂಧಪಟ್ಟ ವಿಭಾಗೀಯ ಡಿ.ಸಿ.ಪಿ ರವರುಗಳ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ.

8. ಸಿ.ಸಿ.ಬಿ ವಿಭಾಗದಲ್ಲಿ 5 ವಿಶೇಷ ತಂಡಗಳನ್ನು ರಚಿಸಲಾಗಿದ್ದು, ಅವುಗಳು ಸಹ ಡಿ.ಸಿ.ಪಿ ಅಪರಾಧ ರವರ ನೇರ ಮೇಲ್ವಿಚಾರಣೆಯಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತದೆ.

5358(6293) ಶ್ರೀ ಚಿರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 10–15 ವರ್ಷ ಸೇವೆಯನ್ನು ಪೂರ್ತಿಗೊಳಿಸಿದ ಸೇವಾನಿರತ ಪದವೀಧರ ಪೊಲೀಸ್ ಸಿಬ್ಬಂದಿಗಳಿಗೆ ವಿಶೇಷ ನೇಮಕಾತಿಯ ಆಧಾರದಲ್ಲಿ ಸಿವಿಲ್ ಪೊಲೀಸ್ ಉಪನಿರೀಕ್ಷಕರ ಹುದ್ದೆಗೆ ನೇಮಕ ಮಾಡುವ ಕುರಿತಾದ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;

ಆ) ಅರ್ಹ ಮತ್ತು ಸೇವಾನುಭವವನ್ನು ಹೊಂದಿರುವ ಪದವೀಧರ ಪೊಲೀಸ್ ವಿಶೇಷ ನೇಮಕಾತಿಯ ಮೂಲಕ ಉಪ ನಿರೀಕ್ಷಕರನ್ನಾಗಿ ಭರ್ತಿ ಮಾಡಿಕೊಂಡು ಕೊರತೆ ಇರುವ ಸದರಿ ಹುದ್ದೆಗಳನ್ನು ತುಂಬಲು ಸರ್ಕಾರ ಮುಂದಾಗುವುದೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) 2000ನೇ ಸಾಲಿನಲ್ಲಿ 150 ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ ಮತ್ತು 2003ನೇ ಸಾಲಿನಲ್ಲಿ 200 ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ 10–15 ವರ್ಷ ಸೇವೆ ಸಲ್ಲಿಸಿರುವ ಸೇವಾ ನಿರತ ಅಭ್ಯರ್ಥಿಗಳಿಂದ (ವಿಶೇಷ) ನಿಯಮಗಳಡಿಯಲ್ಲಿ ನೇಮಕಾತಿ ಮಾಡಲಾಗಿದೆ. ಪ್ರಸ್ತುತ ಸಬ್ ಇನ್ಸ್‌ಪೆಕ್ಟರ್‌ಗಳ ನೇರ ನೇಮಕಾತಿಗೆ ಮಿತವ್ಯಯ ಆದೇಶವನ್ನು ಸಡಿಲಿಸಿದ್ದು, ನೇರ ನೇಮಕಾತಿಯಿಂದ ಸಮರ್ಥ ಅಭ್ಯರ್ಥಿಗಳ ಸೇವೆಯನ್ನು ಪೊಲೀಸ್ ಇಲಾಖೆ ಪಡೆದುಕೊಳ್ಳಬಹುದಾಗಿದೆ. ಈ ನೇರ ನೇಮಕಾತಿಯಲ್ಲಿ ಸೇವಾ ನಿರತ ಅಭ್ಯರ್ಥಿಗಳಿಗೆ ಶೇಕಡಾ 10 ಮೀಸಲಾತಿ ಇರುತ್ತದೆ. ಆದುದರಿಂದ ಸದ್ಯದಲ್ಲಿ 10–15 ವರ್ಷ ಸೇವೆ ಸಲ್ಲಿಸಿದ ಸೇವಾ ನಿರತ ಅರ್ಹ ಅಭ್ಯರ್ಥಿಗಳನ್ನು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ವಿಶೇಷ ನೇಮಕಾತಿ ನಿಯಮಗಳ ಅನ್ವಯ ನೇಮಕಾತಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಆ) ಪ್ರಸ್ತಾವನೆ ಇರುವುದಿಲ್ಲ.

6261(6269) ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್ : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಲೋಕಸೇವಾ ಆಯೋಗದಿಂದ ಪತ್ರಾಂಕಿತ ಮತ್ತು ಸ್ಪರ್ಧಾತ್ಮಕ "ಎ" ಮತ್ತು "ಬಿ" ಗುಂಪಿನ ಹುದ್ದೆಗಳ ಸಂದರ್ಶನಕ್ಕೆ (1999ನೇ ಸಾಲಿನ) ಮತ್ತು 2005ರ ಮುಖ್ಯ ಪರೀಕ್ಷೆಗೆ ಸಾಮಾನ್ಯ ವರ್ಗದಿಂದ ಮತ್ತು ಕೇಂದ್ರ ಹಾಗೂ ರಾಜ್ಯ ಮೀಸಲಾತಿ ಅನ್ವಯ ಅವಕಾಶ ಪಡೆದಿರುವ ಅಭ್ಯರ್ಥಿಗಳಾರು;

(ಹೆಸರು, ವಿದ್ಯಾರ್ಹತೆ ಮತ್ತು ಜಾತಿ ಮುಂತಾದ ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈಗ ನಡೆಯುತ್ತಿರುವ ಪತ್ರಾಂಕಿತ ಮತ್ತು ಸ್ಪರ್ಧಾತ್ಮಕ ಹುದ್ದೆಗಳ ಸಂದರ್ಶನಕ್ಕೆ ಅರ್ಹತೆ ಪಡೆದಿರುವ ಗುಲಬರ್ಗಾ ಕಂದಾಯ ಜಿಲ್ಲೆಗಳ ಅಭ್ಯರ್ಥಿಗಳ ಸಂಖ್ಯೆ ಅತಿ ಕಡಿಮೆ ಪ್ರಮಾಣದಲ್ಲಿರುವುದು ನಿಜವಲ್ಲವೇ;

ಇ) ಹಾಗಿದ್ದಲ್ಲಿ ಗುಲಬರ್ಗಾ ಕಂದಾಯ ವಿಭಾಗದ ಜಿಲ್ಲೆಗಳ ಅಭ್ಯರ್ಥಿಗಳಿಗೆ ಆಯ್ಕೆ ಸಂದರ್ಶನದಲ್ಲಿ ಆದ್ಯತೆ ಮತ್ತು ವಿಶೇಷ ಆದ್ಯತೆ ನೀಡುವ ಕ್ರಮ ಕೈಗೊಳ್ಳುವುದು ನ್ಯಾಯಸಮ್ಮತವಲ್ಲವೇ,

ಈ) ಇಲ್ಲವಾದಲ್ಲಿ ಸೇವೆಯಲ್ಲಿಯೂ ಕೂಡಾ ಪ್ರಾದೇಶಿಕ ತಾರತಮ್ಯ ಮುಂದುವರೆಯಲು ಆಸ್ಪದ ನೀಡಿದಂತೆ ಆಗುವುದು ನಿಜವಲ್ಲವೇ: ಹಾಗಿದ್ದಲ್ಲಿ, ಸರ್ಕಾರದ ಸ್ಪಷ್ಟ ಧೋರಣೆ ಏನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್ಸ್ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ನಿಯಮಗಳು, 1997ರನ್ವಯ 1999ನೇ ಸಾಲಿನ ಮುಖ್ಯ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳು ಮತ್ತು ಮೀಸಲಾತಿ ಅನುಸರಿಸಿ ಪ್ರಕಟಿಸಿರುವ ಹುದ್ದೆಗಳನ್ನು ಅನುಸರಿಸಿ ಪ್ರತಿಯೊಂದು ವರ್ಗದಲ್ಲೂ ಒಂದು ಹುದ್ದೆಗೆ ಐವರಂತೆ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗಿದೆ. ಸಂದರ್ಶನಕ್ಕೆ ಅರ್ಹರಾದ ಅಭ್ಯರ್ಥಿಗಳ ವರ್ಗವಾರು ವಿವರಗಳನ್ನು ಈ ಕೆಳಗೆ ನೀಡಲಾಗಿದೆ:–

ವರ್ಗ	ಅಭ್ಯರ್ಥಿಗಳ ಒಟ್ಟು ಸಂಖ್ಯೆ
ಸಾಮಾನ್ಯ ಅರ್ಹತೆ	480
ಪರಿಶಿಷ್ಟ ಜಾತಿ	152
ಪರಿಶಿಷ್ಟ ಪಂಗಡ	45
ಪ್ರವರ್ಗ–1	35
ಪ್ರವರ್ಗ–2ಎ	134
ಪ್ರವರ್ಗ–2ಬಿ	40
ಪ್ರವರ್ಗ–3ಎ	25
ಪ್ರವರ್ಗ–3ಬಿ	30

ಮೇಲ್ಕಂಡ ನಿಯಮಗಳನ್ವಯ 2005ನೇ ಸಾಲಿನ ಪೂರ್ವಭಾವಿ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿದ ಅಂಕಗಳು ಹಾಗೂ ಮೀಸಲಾತಿ ನೀತಿಯನ್ನು ಅನುಸರಿಸಿ ವಿವಿಧ ವರ್ಗಗಳಿಗೆ ಮೀಸಲಾದ ಹುದ್ದೆಗಳಿಗೆ 1:20ರ ಅನುಪಾತದಲ್ಲಿ ಅಭ್ಯರ್ಥಿಗಳನ್ನು ಮುಖ್ಯ ಪರೀಕ್ಷೆಗೆ ಆಯ್ಕೆ ಮಾಡಲಾಗಿದೆ. ಅವುಗಳ ವಿವರ ಈ ಕೆಳಕಂಡಂತಿದೆ:–